## ಭಂಡ ಡ್ರ್ಯಾಗನ್ ಹುಚ್ಚಾಟ

# 62ರ ಯುದ್ಧಕ್ಕಿಂತ ಹೆಚ್ಚು ಹಾನಿ ಭಾರತಕ್ಕೆ ಮಾಡ್ತೀವಿ: ಚೀನಾ

### ಅಮೆರಿಕ ಬೆಂಬಲಕ್ಕೆ ಬರುತ್ತೆ ಎಂಬ ಭ್ರಮೆ ಬೇಡ ಚೀನಾ ಸರ್ಕಾರದ ಮುಖವಾಣಿ ಪತ್ರಿಕೆ ಗುಡುಗು

ಶಾಂಘೈ: ಲಡಾಖ್ ಗಡಿಯಲ್ಲಿ ಭಾರತದ ಜತೆ ಪದೇ ಪದೆ ತಕರಾರು ಮಾಡುತ್ತಿರುವ ಚೀನಾ, ಭಾರತದಿಂದ ಒಮ್ಮೆ ಹಿಮ್ಮೆಟ್ಟಿಸಿಕೊಂಡಿದ್ದರೂ ಇದೀಗ ಮತ್ತೆ ಭಂಡತನ ಮುಂದುವರೆಸಿದೆ. ಯುದ್ಧ ನಡೆದರೆ ಭಾರತಕ್ಕೆ ಹೆಚ್ಚು ಹಾನಿ ಮಾಡುವ ಹುಚ್ಚು ಹೇಳಿಕೆಯನ್ನು ಚೀನಾ ನೀಡಿದೆ.

ಲಡಾಖ್ ಗಡಿಯಲ್ಲಿ ಸಂಘರ್ಷಮಯ ವಾತಾವರಣ ಮುಂದುವರಿದಿರುವಾಗಲೇ, ಭಾರತ ಏನಾದರೂ ತಂಟೆಗೆ ಬಂದರೆ 1962ರ ಯುದ್ಧದಲ್ಲಿ ಆದದ್ದಕ್ಕಿಂತ ಹೆಚ್ಚು ನಷ್ಟವನ್ನು ಉಂಟು ಮಾಡುವುದಾಗಿ ಭಾರತಕ್ಕೆ ಚೀನಾ ಎಚ್ಚರಿಕೆ ನೀಡಿದೆ.

ಚೀನಾ ಸರ್ಕಾರದ ಮುಖವಾಣಿಯಾಗಿರುವ 'ಗ್ಲೋಬಲ್ ಟೈಮ್ಸ್'ನಲ್ಲಿ ಈ ಕುರಿತು ಸಂಪಾದಕೀಯ ಬರೆದು ತೀಕ್ಷ್ಣ ಎಚ್ಚರಿಕೆಯನ್ನು ನೀಡಲಾಗಿದೆ. ಭಾರತ ಶಕ್ತಿಶಾಲಿ ಚೀನಾವನ್ನು ಎದುರು ಹಾಕಿಕೊಳ್ಳುತ್ತಿದೆ. ತನಗೆ ಅಮೆರಿಕದಿಂದ ಬೆಂಬಲ ಸಿಗಲಿದೆ ಎಂಬ ಭ್ರಮೆಯನ್ನು ಭಾರತ ಕಾಣುವುದು ಬೇಡ. ನಮ್ಮ ಜೊತೆಗೆ ಭಾರತಕ್ಕೆ ಸ್ಪರ್ಧೆಯೇ ಬೇಕೆಂದಾದರೆ, ಚೀನಾದ ಬಳಿ ಭಾರತಕ್ಕಿಂತ ಹೆಚ್ಚು ಸಾಮರ್ಥ್ಯ ಹಾಗೂ ಸಲಕರಣೆಗಳಿವೆ. ಭಾರತ ತನ್ನ ಸೇನಾ ಸಾಮರ್ಥ್ಯ ಪ್ರದರ್ಶಿಸಲು ಬಂದರೆ ಚೀನಾದ ಸೇನೆ ಖಂಡಿತ ಭಾರತದ ಸೇನೆಗೆ 1962ರಲ್ಲಿ ಉಂಟುಮಾಡಿದ್ದಕ್ಕಿಂತ ಹೆಚ್ಚು ನಷ್ಟ ಉಂಟುಮಾಡುವುದು ನಿಶ್ಚಿತ ಎಂದು ಪತ್ರಿಕೆ ಗುಡುಗಿದೆ.

ಚೀನಾದ ಜೊತೆಗೆ ಭಾರತ ಸ್ಪರ್ಧೆಗೆ ಬಿದ್ದರೆ ಆ ದೇಶಕ್ಕೆ ಹಿಂದೆಂದಿಗಿಂತ ಹೆಚ್ಚು ನಷ್ಟ ಉಂಟುಮಾಡುವ ಶಕ್ತಿ ಚೀನಾಕ್ಕಿದೆ. ಗಡಿಯಲ್ಲಿ ಭಾರತದ ಯೋಧರೇ ಮೊದಲಿಗೆ ವಿಧ್ವಂಸಕ ಕೃತ್ಯಕ್ಕೆ ಕೈಹಾಕಿದ್ದಾರೆ. ಈ ಬಾರಿ ಬಿಕ್ಕಟ್ಟನ್ನು ಆರಂಭಿಸಿರುವುದೇ ಭಾರತೀಯರು ಎಂದು ಪತ್ರಿಕೆ ದೂರಿದೆ.